ಅರುಣ್ ಕುಲಕರ್ಣಿ, ನರೇಗಲ್ಲ

ಮಡದಿಯ ಮಾತನ್ನು ಕೇಳುವುದರಿಂದ ಆಗುವ ಲಾಭಗಳು ಯಾವುವು?



ಕೇಳದಿದ್ದರೆ ಆಗುವ ನಷ್ಟ, ಕ್ಲೇಶ, ಕಿರಿಕಿರಿ ಎಲ್ಲವೂ ತಪ್ಪುತ್ತವೆ.

ಸುನಿತಪ್ರಿಯಾ ಪೆಮ್ಮಳ್ಳಿ, ಪಾವಗಡ

ಮಂಗಳಗ್ರಹಕ್ಕೂ ಚಂದ್ರಲೋಕಕ್ಕೂ ಯಾವ ಸಂಬಂಧ?

ಅಡ್ಡಾದಿಡ್ಡಿ ಸಂಬಂಧ – ಮಂಗಳಗ್ರಹಕ್ಕಿರುವ ಎರಡು ಚಂದ್ರಗಳೂ ಅಡ್ಡತಿಡ್ಡವೇ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಇಂದಿನ ದಿನಗಳಲ್ಲಿ ತುಂಬಾ ಮಕ್ಕಳನ್ನು ಹೆತ್ತರೆ ಏನಾಗಬಹುದು ಸರ್?

ಅನೀಮಿಯಾ, ನಿಶ್ಶಕ್ತಿ.

ಜೆ.ಆರ್ ಆದಿನಾರಾಯಣಮುನಿ, ಕೊಳ್ಳೇಗಾಲ

ಕಣ್ಣೀರು ಯಾವುದರ ಸೂಚಕ ಗುರುಗಳೆ?



ಕಂಪ್ಯೂಟರ್, ಮೊಬೈಲ್ ಬಳಕೆ ಅತಿಯಾಯಿತು. ಸ್ಕ್ರೀನ್ ಟೈಂ ಕಡಿಮೆಮಾಡಿ ಎನ್ನುವುದರ ಸೂಚಕ.

ಬಿ.ಎಸ್. ನಾರಾಯಣಸ್ವಾಮಿ, ಬೋಧನಹೊಸಹಳ್ಳಿ

ಪ್ರೇಯಸಿಯ ಹೃದಯದ ಬಾಗಿಲನ್ನು ಎಷ್ಟು ಬಡಿದರೂ ತೆರೆಯಲೇ ಇಲ್ಲ. ಕಾರಣವೇನಿರಬಹುದು?

ಅವಳು ಕಳುಹಿಸಿರುವ ಓಟಿಪಿಯ ಸಂಖ್ಯೆಗಳ ಪ್ರಕಾರ ನೀವು ತಟ್ಟುತ್ತಿಲ್ಲವಂತೆ.

ಪಿ. ಶಂಕರಪ್ಪ, ಶಿವಮೊಗ್ಗ

ದೊಡ್ಡುದ್ದೇಲಿರೋವ್ರು ತೊಂದ್ರೆಗಳಿಗೆ ತಮ್ಮ ಹಿಂದಿನವ್ರೇ ಕಾರಣಾಂತ ಕೈತೊಳ್ಕೊಳ್ತಾರಲ್ಲ, ಇದಕ್ಕೆ ಪರಿಹಾರ?

'ನಿಮ್ಮ ಮುಂದಿನವರು ಸರಿಪಡಿಸುತ್ತಾರೆ. ಗೆಟೌಟ್' ಎನ್ನುವುದು.

ಕೆ.ವಿ. ಗೋವಿಂದಾಚಾರಿ, ಮೈಸೂರು

ನಾನು ಬಡವ ಎನ್ನುವವರಿದ್ದಾರೆ. ನಾನು ಶ್ರೀಮಂತ ಎನ್ನುವವರಿಲ್ಲ. ಏಕೆ?

ಸಾಲ, ದಾನ, ವಂತಿಗೆ ಕೇಳುವವರ ಕ್ಯೂ ತಪ್ಪಿಸಿಕೊಳ್ಳಲು.

ಬಿ. ಚಂದ್ರೇಗೌಡ, ಬೆಂಗಳೂರು

'ನಾನು' ಎನ್ನುವುದಕ್ಕೂ, 'ನಾವು' ಎನ್ನುವುದಕ್ಕೂ ಏನು ವ್ಯತ್ಯಾಸ?

'ನಾನು' ಸಮಾಜದ ಕನಿಷ್ಠ ಅಂಗ; 'ನಾವು' ಬದುಕು ಸಾಗಿಸಲು ಅವಶ್ಯವಾದ ನಾವೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ನಂಬಿಕೆಗೂ, ಅನುಮಾನಕ್ಕೂ ಎಷ್ಟು ವ್ಯತ್ಯಾಸ?

ಕಣ್ಣುಕಿವಿಗಳ ನಡುವಣ ಅಂತರವಾದ ಕೈಯಗಲದಷ್ಟು – ಕಂಡಿದ್ದು ನಂಬಿಕೆ, ಕೇಳಿದ್ದು ಅನುಮಾನಾಸ್ಪದ.

ಎಸ್ಸೆನ್ ಮಹಾಬಲರಾವ್, ಎನ್ನಾರ್‍ಪುರ

ಸನ್ಯಾಸ ಸ್ವೀಕರಿಸುವಾಗ ಹೆಂಡತಿಯು ನೋಡುವಂತಿಲ್ಲವಂತೆ?

ನೋಡಿದರೆ ಇವನನ್ನು ಒದ್ದು ವಾಪಸ್ ಕರೆದುಕೊಂಡು ಹೋಗುವ ಸಾಧ್ಯತೆಯೇ ಹೆಚ್ಚಂತೆ.

ಬಿದರಹಳ್ಳಿ ಐಶ್ವರ್ಯ, ಹಿರೇಹಡಗಲಿ

ಹಕ್ಕಿನ ಮನೆಗೂ, ಹಂಗಿನ ಮನೆಗೂ ಇರುವ ವ್ಯತ್ಯಾಸವೇನು?

ಇಲ್ಲಿ ಧಣಿ; ಅಲ್ಲಿ ದಣಿ!

ಬಿ.ಆರ್. ಉಷಾ, ಕೆನಡಾ

ಅವನೊಬ್ಬ ಛತ್ರಿ ಅಂತಾರಲ್ಲ, ಹಾಗೆಂದರೇನು?

ಬಿರುಗಾಳಿ–ಮಳೆಗೆ ಮೇಲ್ಮುಖವಾಗಿಬಿಟ್ಟು ರಕ್ಷಿಸುವ ಬದಲು ಸಿಲುಕಿಸುವ ಕೊಡೆಯ ಗುಣದವನೆಂದು.

ಅನಸೂಯ ಟಿ, ಕೇದಿಗೆಮನೆ

ಯಾರಲ್ಲೂ ಕೇಳಬಾರದ ಪ್ರಶ್ನೆ ಯಾವುದು?

'ನಿಮ್ಮ ಮತ ಯಾರಿಗೆ?' ಎಂದು. ಹೀಗೆ ಕೇಳಬಾರದೆಂದು ನಮ್ಮ ವಾಹಿನಿಗಳಿಗೆ ತಿಳಿದಿಲ್ಲ.

## ವಾರದ ಪ್ರಶ್ನೆ

ಆರ್. ಮಧುಸೂದನ್, ಹಾಸನ

ಚುನಾವಣೆಗಳು ಬೇಸಿಗೆಯಲ್ಲೇ ಬರುವುದು ಏಕೆ?

ಮಳೆಗಾಲದಲ್ಲಿ ಮತದಾರನ ಕುಡಿದ ನಶೆ ಇಳಿದುಬಿಡುವುದರಿಂದ ಅಯೋಗ್ಯರು ಸೋಲುವ ಅಪಾಯವಿರುತ್ತದೆ.

ಮಲ್ಲಿಕಾರ್ಜುನ, ಸುರಧೇನುಪುರ

ದೇವರು ಮೊದಲೋ, ಭಕ್ತರು ಮೊದಲೋ?

ರುಚಿಕರ ಪ್ರಸಾದಕ್ಕಂತೂ ಭಕ್ತರೇ ಮೊದಲು.

ದಿನೇಶ್, ಗುಡ್ಡದೂರು

ಮಠಾಧೀಶರಿಗೂ ರಾಜಕಾರಣಿಗಳಿಗೂ ಇರುವ ವ್ಯತ್ಯಾಸವೇನು?

ಮಠಾಧೀಶರು ಮುಖ್ಯಮಂತ್ರಿ ಆಗಬಹುದು; ಮುಖ್ಯಮಂತ್ರಿ ಮಠಾಧೀಶ ಆಗಲು ಸಾಧ್ಯವಿಲ್ಲ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಎವರೆಸ್ಟ್ ಶಿಖರವನ್ನು ಏರಲು ತಯಾರಿಗಾಗಿ ಏನನ್ನು ಹತ್ತಬೇಕು ಗುರುಗಳೆ?



ಆತ್ಮವಿಶ್ವಾಸದ ಶಿಖರಗಳನ್ನು.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಪ್ರಪಂಚವೇ ಶೂನ್ಯ ಎನ್ನುವವರಿಗೆ ತಾವೇನೆನ್ನುವಿರಿ ರಾಂಜೀ?

ಶೂನ್ಯ= ಸೊನ್ನೆ= ವರ್ತುಲ= ವೃತ್ತ= ತುದಿಯಿಲ್ಲದ್ದು= ಅನಂತ! ಅನಂತದ ಅರ್ಥಾನ್ವೇಷಣೆಯೇ ಜೀವನ.

ಸುಧೀಂದ್ರ, ಬೆಂಗಳೂರು

ಗಾಯದ ಕಾರಣದಿಂದ ರಾಷ್ಟ್ರೀಯ ತಂಡದಿಂದ ಹೊರಗುಳಿಯುವ ಕ್ರಿಕೆಟಿಗರು ಐಪಿಎಲ್‌ಗೆ ಫಿಟ್ ಆಗ್ತಾರಲ್ಲ?

ದೇಶಪ್ರೇಮಕ್ಕಿಂತ ದೇಹಪ್ರೇಮ ಹೆಚ್ಚಿರುವ ಅವರ ಧ್ಯೇಯವೇ 'ಕನಿಷ್ಠ ಬೆವರು, ಗರಿಷ್ಠ ಡಾಲರು'.

■ ರಾಮ್